ಅನುಭವಿಸುತ್ತಾನೆ. ದಿವ್ಯಾ ತನ್ನೊಡನೆ ಬ್ರೇಕಪ್ ಮಾಡಿಕೊಳ್ಳಲಿದ್ದಾಳೆ ಎಂದು ನಿಚ್ಚಳವಾಗುತ್ತಿದ್ದ ಹಾಗೆಯೇ ಪ್ರಶಾಂತ್ ತಮ್ಮಿಬ್ಬರ ಸಂಬಂಧದ ಹಿನ್ನೋಟಕ್ಕೆ ಜಿಗಿಯುತ್ತಾನೆ. ಯೋಚಿಸುತ್ತ ಹೋದ ಹಾಗೆಲ್ಲ ದಿವ್ಯಾ ತನ್ನನ್ನು ಯಾವತ್ತೂ ಪ್ರೀತಿಸಿರಲೇ ಇಲ್ಲ, 'ಅವಳಿಗೆ ಎರಡು ಜಡಿಮಳೆಗಳ ಮಧ್ಯೆ ಒಂದು ಸಾದಾ ಖಾಲಿತನ ಬೇಕಿತ್ತು, ಅದು ನಾನಾದೆ' ಎಂಬ ನಿರ್ಧಾರಕ್ಕೆ ಬರುತ್ತಾನೆ.

ಸಂಪತ್ ಅವರ ಭಾಷೆಗೆ ಹರಿತವಾದ ವ್ಯಂಗ್ಯವೂ, ಚಿತ್ರಕಶಕ್ತಿಯೂ ಇದೆ. ಅವರ ಬಹುತೇಕ ಎಲ್ಲ ಕಥೆಗಳಲ್ಲಿಯೂ ತೆಳುವಾದ ವ್ಯಂಗ್ಯ ಕಾಣಿಸುತ್ತದೆ. ಆದರೆ, ಈ ಕಥೆಯ ಭಾಷೆಯಲ್ಲಿ ಆ ವ್ಯಂಗ್ಯವಿಲ್ಲ. ಆದರೆ, ವಿಚಿತ್ರವಾದ ಧ್ವನಿಶಕ್ತಿಯಿದೆ. ಈ ಕಥೆಯ ನಾಯಕ, ತನ್ನನ್ನು ಬಿಟ್ಟುಹೋಗಲಿರುವ ಗೆಳತಿಯನ್ನು ಕಟಕಟೆಯಲ್ಲಿಟ್ಟು ಅವಳ ಬಗ್ಗೆ ಆರೋಪಪಟ್ಟಿ ಸಲ್ಲಿಸುತ್ತಲೇ ಇದ್ದಾನೆ. ಆದರೆ, ಅವನ ಮಾತುಗಳ ಟೋನ್‌ನಲ್ಲಿ ಒಂದು ಬಗೆಯ ಅಭದ್ರತೆ ಎದ್ದು ಕಾಣುತ್ತದೆ. ಯಾವುದು ಅಲ್ಲವೆಂದು ತನಗೇ ಗೊತ್ತಿದೆಯೋ ಅದನ್ನು ಹೌದು ಎಂದು ಹೇಳುವಾಗ ಧ್ವನಿಯಲ್ಲಿ ಒಂದು ಬಗೆಯ ಕೀರಲುತನ ಕಾಣಿಸಿಕೊಳ್ಳುತ್ತದಲ್ಲ, ಅಂಥ ಕೀರಲುತನ ಈ ಕಥೆಯ ನಿರೂಪಣೆಯಲ್ಲಿ ಬಹುಸೂಕ್ಷ್ಮವಾಗಿ ಅಡಗಿಕೊಂಡಿದೆ. ತನಗೆ 'ಲೆಟ್ಸ್ ಬ್ರೇಕಪ್' ಎಂದು ಹೇಳಲಿರುವ ದಿವ್ಯಾಳನ್ನು ದಿಟ್ಟವಾಗಿ ಎದುರಿಸಲು ಸಿದ್ಧವಾಗುತ್ತಿರುವಂತೆ ಕಾಣಿಸುವ ಪ್ರಶಾಂತ್, ವಾಸ್ತವದಲ್ಲಿ ತಾನೇ ಅವಳಿಗೆ ಆ ಮಾತನ್ನು ಹೇಳಲು ಸಿದ್ಧಗೊಳ್ಳುತ್ತಿರುತ್ತಾನೆ! ಇದನ್ನು ಎಲ್ಲಿಯೂ ವಾಚ್ಯಗೊಳಿಸದೆ ಬೆಳೆಸಿರುವುದರಿಂದ ಈ ಕಥೆಗೆ ಮನುಷ್ಯನ ಮನೋಲೋಕದ ವಿನ್ಯಾಸಗಳನ್ನು ಧ್ವನಿಸುವ ಶಕ್ತಿ ಸಿದ್ಧಿಸಿದೆ. ಹಾಗಾಗಿಯೇ ಇದು ಬರೀ ನಾಯಕ–ನಾಯಕಿಯ ಬ್ರೇಕಪ್ ಕಥನವಷ್ಟೇ ಆಗದೆ, ಮನುಷ್ಯ ಸಂಬಂಧಗಳಲ್ಲಿ ಬಹುಸೂಕ್ಷ್ಮವಾಗಿ ಹೆಣೆದುಕೊಂಡಿರುವ ಸಹಜತೆ ಮತ್ತು ಕೃತಕತೆಗಳ ಕುರಿತು ನಮ್ಮನ್ನು ಯೋಚಿಸುವಂತೆ ಪ್ರೇರೇಪಿಸುತ್ತದೆ.

ಮೇಲೆ ಉಲ್ಲೇಖಿಸಿದ ಕಥೆಯಲ್ಲಿ ನಾಯಕ ಕೊನೆಯಲ್ಲಿ ಬ್ರೇಕಪ್ ಮಾಡಿಕೊಂಡರೆ, ಈ ಸಂಕಲನದ ಮೊದಲನೇ ಕಥೆ 'ಎರಡನೇ ಬ್ರಹ್ಮಚರ್ಯ'ದಲ್ಲಿ ಇದಕ್ಕೆ ಪೂರ್ತಿ ವಿರುದ್ಧ ಸನ್ನಿವೇಶವಿದೆ. ಪ್ರೇಮಿಸಿಯೇ ಮದುವೆಯಾಗಿದ್ದ ಹೆಂಡತಿಯೊಂದಿಗೆ ಸಂಬಂಧವನ್ನು ಕಡಿದುಕೊಳ್ಳಲು ಅವನು ಬಯಸುತ್ತಿದ್ದಾನೆ. ಆದರೆ, ಅದನ್ನು ಹೇಗೆ ಹೇಳುವುದು? ಸಂಬಂಧವನ್ನು ಮುರಿದುಕೊಳ್ಳಲು ಬಲವಾದ ಕಾರಣಗಳೇ ಅವನಲ್ಲಿ ಇಲ್ಲ. ಹಾಗೆ ಇರಬೇಕಾಗಿಯೂ ಇಲ್ಲ ಅಲ್ಲವೇ? ಬಲವಾದ ಕಾರಣಗಳು ಇಲ್ಲದೆಯೂ ಸಾಂಗತ್ಯ ಅಸಹನೀಯವೆನಿಸಬಹುದು. ಯಾರಿಗೂ ಕಾಣಿಸದ ಬೇಲಿಯೊಂದು ತನ್ನ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳುತ್ತಿದೆ ಅನಿಸಬಹುದು. ತುಂಬ ಒಳ್ಳೆಯವರ ಜೊತೆಗಿನ ಸಂಗಾತವೂ ಒಗ್ಗದೇ ಹೋಗಬಹುದು. ಆದರೆ, ಅದನ್ನು ಅರಿತುಕೊಳ್ಳಲೂ ಒಂದು ಗಟ್ಟಿಯಾದ ವ್ಯಕ್ತಿತ್ವ ಬೇಕು. ಅಂಥ ವ್ಯಕ್ತಿತ್ವ ಇಲ್ಲಿನ ನಾಯಕನಿಗೆ ಇಲ್ಲ. ಅವನಲ್ಲಿ ವ್ಯಕ್ತಿಸ್ವಾತಂತ್ರ್ಯಕ್ಕಾಗಿ ಹಂಬಲಿಸುವುದಕ್ಕಿಂತಲೂ, ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುವ ಪಲಾಯನವಾದವೇ ಎದ್ದು ಕಾಣುತ್ತದೆ. ಅದನ್ನು ಮುಚ್ಚಿಕೊಳ್ಳಲು ವ್ಯಕ್ತಿಸ್ವಾತಂತ್ರ್ಯದ ಸೋಗನ್ನೂ ಬಿಂಬಿಸುತ್ತಿರುತ್ತಾನೆ. ಬದುಕಿನಲ್ಲಿ ಎದುರಾಗುವ ಯಾವುದನ್ನೂ ದಿಟ್ಟಿಸಿ ನೋಡಲಾಗದ ಅವನ ಪೊಳ್ಳುತನವೇ ಅವನನ್ನು ಮತ್ತದೇ ಪಂಜರದಲ್ಲಿ ಬಂಧಿಯಾಗುವಂತೆ ಮಾಡುತ್ತದೆ. ಕೊನೆಗೂ ಅವನಿಗೆ ಹೆಂಡತಿಯ ಜೊತೆಗೆ ಬ್ರೇಕಪ್ ಮಾಡಿಕೊಳ್ಳುವ ಮಾತು ಆಡಲು ಸಾಧ್ಯವಾಗುವುದೇ ಇಲ್ಲ.

ನಾಯಕ ಹೆಂಡತಿಯೊಂದಿಗಿನ ಸಂಬಂಧವನ್ನು ಮುರಿದುಕೊಳ್ಳಬೇಕೇ? ಮುಂದುವರಿಸಬೇಕೆ ಎಂಬ ಕುರಿತು ನಿರ್ಣಯವನ್ನು ಹೇಳುವುದರಲ್ಲಿ ಕಥೆಗಾರನಿಗೆ ಅಂಥ ಆಸಕ್ತಿ ಇಲ್ಲ. ದಾಂಪತ್ಯದ ಆದರ್ಶವನ್ನು ಮೆರೆಯುವ ಉದ್ದೇಶವೂ ಈ ಕಥೆಗೆ ಇಲ್ಲ. ವ್ಯಕ್ತಿಸ್ವಾತಂತ್ರ್ಯಕ್ಕೂ ಪೊಳ್ಳುತನಕ್ಕೂ ಇರುವ ಬಹುಸೂಕ್ಷ್ಮವಾದ ವ್ಯತ್ಯಾಸವನ್ನು ಈ ಕಥೆ ಅಷ್ಟೇ ಸೂಕ್ಷ್ಮವಾಗಿ ಕಟ್ಟಿಕೊಡುತ್ತದೆ. ಹಾಗಾಗಿಯೇ ಕೊನೆಯಲ್ಲಿ ನಾಯಕ ಹೆಂಡತಿಗೆ ಬ್ರೇಕಪ್ ಆಗುವ ಮಾತು ಆಡದೆ ಇರುವುದು ದಾಂಪತ್ಯದ ಶಕ್ತಿಯಾಗಿ ಕಾಣಿಸುವುದಿಲ್ಲ. ತನ್ನ ಪೊಳ್ಳು ವ್ಯಕ್ತಿತ್ವಕ್ಕೆ ತಾನೇ ನೇತುಬಿದ್ದವನ ಚಿತ್ರವನ್ನು ವ್ಯಂಗ್ಯವಾಗಿ ಕಾಣಿಸುವುದರ ಮೂಲಕ ಈ ಕಥೆ ಕೊನೆಗೊಳ್ಳುತ್ತದೆ. ಸಂಬಂಧಗಳ